ನಡುಬಾಡೆ ಇ–ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ:47 ದಿನಾಂಕ: 17/11/26, ಮಂಗಳವಾರ 8951073556 ನಾಳಂಕೆ : ಬಿರ್ಯಾರ್ - 02, ಚೊವ್ವಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews ಪುಟ:1

ಕಾಮಗಾರಿ ಮಾಡದವರು ಕಾಲು ಕೀಳುವುದು ಒಳಿತು...

ಗಾಳಿಬೀಡು ರಸ್ತೆ ಕಾಮಗಾರಿ ವಿಳಂಬಕ್ಕೆ, ಶಾಸಕ ಮಂಥರ್ ಗೌಡ ಕೆಂಡ, ಗಡುವಿನೊಳಗೆ ಮುಗಿಸದಿದ್ದರೆ, ಗುತ್ತಿಗೆದಾರ ಬ್ಲಾಕ್‌ಲಿಸ್ಟ್, ಅಧಿಕಾರಿ ಅಮಾನತು ಎಚ್ಚರಿಕೆ...



@NadubadeNews;ನ.17, ಮಡಿಕೇರಿ: ಗುತ್ತಿಗೆ ಕಾಮಗಾರಿ ಪಡೆದವರು ನಿಗಧಿತ ಸಮಯದಲ್ಲಿ ಕಾಮಗಾರಿ ಮುಗಿಸುವಂತೆ, ಗುಣಮಟ್ಟ ಕಾಯ್ದುಕೊಳ್ಳುವಂತೆ ನಿಗಾವಹಿಸುವುದು ಅಧಿಕಾರಿಗಳ ಕರ್ತವ್ಯವಾಗಿದ್ದು, ತಪ್ಪಿದಲ್ಲಿ ಗುತ್ತಿಗೆದಾರ ಮತ್ತು ಅಧಿಕಾರಿ ಇಬ್ಬರೂ ಜಿಲ್ಲೆಯಿಂದ ಕಾಲ್ಕೀಳುವುದು ಒಳಿತು ಎಂದು ಮಡಿಕಾರಿ ಶಾಸಕ ಡಾ. ಮಂಥರ್ ಗೌಡ ಕಿಡಿಕಾರಿದ್ದಾರೆ. ಮಡಿಕೇರಿಯಿಂದ ಗಾಳಿಬೀಡು, ಕಾಲೂರು, ವಣಚಲು, ಚಪ್ಪಂಡ ಕೆರೆ ಸೇರಿದಂತೆ ಹಲವು ಜನವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಲೋಕೋಪಯೋಗಿ ರಸ್ತೆಯ ಅಭಿವೃದ್ಧಿ ಕಾಮಗಾರಿ ಇದೀಗ ಮಹತ್ವದ ತಿರುವು ಪಡೆದುಕೊಂಡಿದೆ. ಸುಮಾರು 25 ವರ್ಷಗಳಿಂದ ಈ ಭಾಗದ ಜನರ ಬಹು ದಿನಗಳ ಬೇಡಿಕೆಯಾಗಿದ್ದ ರಸ್ತೆ ಅಭಿವೃದ್ಧಿಗೆ ಶಾಸಕ ಡಾ. ಮಂತರ್ ಗೌಡ ಅವರು ₹3.5 ಕೋಟಿ ಅನುದಾನ ಒದಗಿಸಿ ಕಾಮಗಾರಿಗೆ ಚಾಲನೆ ನೀಡಿದ್ದರು. ಆದರೆ ಗುತ್ತಿಗೆದಾರರ ನಿರ್ಲಕ್ಷ್ಯ ಹಾಗೂ ಕಾಮಗಾರಿ ವಿಳಂಬದಿಂದ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಇದನ್ನು ಗಮನಿಸಿದ ಶಾಸಕರು ಗಾಳಿಬಿಡು ಗ್ರಾಮಸ್ಥರು ಹಾಗೂ ಅಧಿಕಾರಿಗಳ ಜೊತೆಗೆ ನಡೆಸಿದ ಮಹತ್ವದ ಸಭೆಯಲ್ಲಿ ಶಾಸಕರು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಖಡಕ್ ಎಚ್ಚರಿಕೆ ನೀಡಿದ್ದು, ಜನವರಿ 15ರೊಳಗೆ ಯಾವುದೇ ಕಾರಣಕ್ಕೂ ರಸ್ತೆ ಕಾಮಗಾರಿ ಪೂರ್ಣಗೊಳಿಸಲೇಬೇಕು ಎಂದು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ.

ಗಡುವಿನೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದಲ್ಲಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತು ಗೊಳಿಸುವುದಾಗಿಯೂ ಎಚ್ಚರಿಕೆ ನೀಡಿದ್ದಾರೆ.

ಈ ಭಾಗದ ಜನರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಡಾ. ಮಂತರ್ ಗೌಡ ಅವರು ಚುನಾವಣಾ ಸಂದರ್ಭದಲ್ಲಿ ನೀಡಿದ್ದ ಭರವಸೆಯನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ 2025ರ ಜನವರಿಯಲ್ಲಿ ಬರೋಬ್ಬರಿ ₹3.5 ಕೋಟಿ ಅನುದಾನ ಒದಗಿಸಿದರು ಲೋಕೋಪಯೋಗಿ ಇಲಾಖೆಯ ಕಾರ್ಯಾದೇಶದ ಪ್ರಕಾರ 2026ರ ಮೇ 28ರೊಳಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಮೊದಲ ಹಂತದ ಕಾಮಗಾರಿ ಪೂರ್ಣಗೊಂಡ ಬಳಿಕ ಮುಂದುವರಿದ ಭಾಗದ ರಸ್ತೆ ಅಭಿವೃದ್ಧಿಗೆ ಹೆಚ್ಚುವರಿಯಾಗಿ ₹5 ಕೋಟಿ ಅನುದಾನ ಒದಗಿಸುವುದಾಗಿಯೂ ಶಾಸಕರು ಭರವಸೆ ನೀಡಿದ್ದರು. ಆದರೆ ಕಾಮಗಾರಿ ಆರಂಭದಲ್ಲಿ ವೇಗ ಪಡೆದುಕೊಂಡು ಸುಮಾರು ಶೇ.20ರಷ್ಟು ಪೂರ್ಣಗೊಂಡ ಬಳಿಕ ದಿಢೀರನೆ ಕಾಮಗಾರಿ ಸ್ಥಗಿತಗೊಂಡಿತು.

ಹಲವು ಬಾರಿ ಸೂಚನೆ ನೀಡಿದರೂ ಕಾಮಗಾರಿ ನಿರೀಕ್ಷಿತ ವೇಗ ಪಡೆದುಕೊಳ್ಳಲಿಲ್ಲ. ಕಾಮಗಾರಿ ವಿಳಂಬದಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದ ಗ್ರಾಮಸ್ಥರು ಇತ್ತೀಚೆಗೆ ರಸ್ತೆ ತಡೆ ನಡೆಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ಶಾಸಕರಾದ ಡಾಕ್ಟರ್ ಮಂತರ್ ಗೌಡರವರು ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಗ್ರಾಮಸ್ಥರೊಂದಿಗೆ ಸಭೆ ನಡೆಸಲು ಮಹತ್ವದ ನಿರ್ಧಾರ ಮಾಡಿದ ಶಾಸಕರು ನಿನ್ನೆ ಸಂಜೆ ನಡೆದ ಸಭೆಯಲ್ಲಿ ರಸ್ತೆ ಕಾಮಗಾರಿಯ ವಿಳಂಬದ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕಾಮಗಾರಿಯನ್ನು ಇನ್ನಷ್ಟು ವಿಳಂಬಗೊಳಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಶಾಸಕರು, ಜನವರಿ 15ರೊಳಗೆ ಸಂಪೂರ್ಣ ರಸ್ತೆ ಕಾಮಗಾರಿಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರು ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ರಾಷ್ಟ್ರಮಟ್ಟ ಕರಾಟೆಲ್ ದಂಡನೇ ಇನಾಂ..



@NadubadeNews;ನ.17, ಮಡಿಕೇರಿ: ಹುಣಸೂರ್‌ಲ್ ನಡಂದ ರಾಷ್ಟ್ರ ಮಟ್ಟ ಕರಾಟೆ ಚಾಂಪಿಯನ್'ಷಿಪ್‌ಲ್ ಮೂಕೊಂಡ ಕಾವೇರಮ್ಮ ದಂಡನೆ ಇನಾಮ್ ಪಡಂದಂಡಿತ್. ಈ ಮೂಡಿಕುಂಞ. ಬಿಳುಗುಂದಕಾರಳನ ಮೂಕೊಂಡ ಜಾಲ - ಸ್ವಾತಿ ದಂಪತಿಯಡ ಮೋವ.



ಕೊಯವ ಜನಾಂಗತ್ರ 21ನೇ ಮೋಪ್;ಕಳಿತೆಳಿರ ಒತ್ತೋರ್ಮೆ...

ಕೊಡವ ಪರಂಪರೆರ ಪಡಿಪುಂಗೊಡ್‌ಪುಕ್ ಕೈತೆಕ್ಕೋಕ್ ಮೊಟ್ಟ್...



@nadubadewarthe ಮಡಿಕೇರಿ, ನ.16: ಕೊಯವ ಜನಾಂಗತ್ರ 21ನೇ ಮಾಕೂಟ್ ಪಿಂಞ ಕಳಿಕೂಟ್ ಸಭೆನ ಮೂನಾಡ್ (ಮೂರ್ನಾಡು)ಲ್ ಬಾರಿ ಅಂದೋಡೆ ನಡ್'ತ್'ಚಿ. ಈ ಸಭೆಲ್ ಪಡಿಪುಲ್ ಏರ ಕಣಕ್ ಎಡ್ತಂಡ ಮಕ್ಕಕ್ ಪುರ್'ಡ್ ಪಣತ್'ನ ಇನಾಮಾಯಿತ್ ಕೊಡ್ತತ್. ಅಲ್ಲತೆ, ಬೋರೆ ಬೋರೆ ಕೋವ್'ಲ್ ಸಾಧಕಂಗಳ ಗುರ್ತ್'ಚಿಟ್ಟಿತ್ ತೊಮ್ಮಾನ ಮಾಡ್'ಚಿ. ಕೊಯಮ ಜನಾಂಗತ್ರ ಕೊರುವಕಾರ ಜಿಲ್ಲಂಡ ದಾದು ಮಾದಪ್ಪ ಸಭೆರ ಕೊರುವಕಾರನಾಯ್ತ್ ನಾಲ್ ಮೊಳಿಟ್ಟ ತಕ್ಕ್'ಲ್ ಜನಾಂಗಕ್ ಕೂಡ್'ನವು ಕಾಲಾಂಡೆಕೊಮ್ಮೆ ಇನ್ನನೆ ಕೂಡಿಯಾಡ್'ಚೆಂಗಿ ವಿಸಿಯ ಮಾತ್'ಲ್ ನಡ್'ಪದು ಅಲ್ಲತೆ, ನಂಗಡ ಬೆಂದುತ್ವ ಗೆಟ್ಟಿಯಾಪ, ಬಲಬಪ್ಪ ಎಣ್ಣುಚಿ.

ಇಕ್ಕಾಕಲೇ, ಮೂಂದ್'ನಾಡ್'ಕ್ ಅಡ್'ಂಗ್'ನಲ್ಲಿ ಜಾಗತ್'ನ ಕೊಯವ ಸಮಾಜ ಕ್ರಯಕ್ ಎಡ್ತಂಡದ್ ಅಲ್ಲತೆ, ಮಿಂಞತ್ರ ನಿರ್ಮಾಣ ಕಾರ್'ಬಾರ್'ಕ್ ಮೊಳ ಇಟ್ಟಿತ್. ಮಡಿಕೇರಿ ಕ್ಷೇತ್ರ ಶಾಸಕ 5 ಲಕ್ಷ ಪಣ ಅನುದಾನ ಮಂಜೂರ್ ಮಾಡಿತ್ ತಂದಿತ್. ಭೂಮಿಪೂಜೆ ಕಯಿಚಿತಾಚಿ. ಕಟ್ಟಡ ಕಾಮಗಾರಿ ನಡ್'ಪದುಂಡ್. ಇಂಞಞೊರಚ್ಚ ಅನುದಾನ ಇಂಞ್ಞಿ ಮಿಂಞಕ್ ಸರಕಾರತಿಂಜ ಕೇಟೊಂಡೂಂದು, ಸಂಸದಂಗ ಪಿಂಞ ಹಿಂದುಳಿದ ವರ್ಗಗಳ ಇಲಾಖೆರ ಆದನೆಲು ಅನುದಾನ ಕೇಪಕ್ ಮೇನತ್ ಮಾಡೊಂಡೂಂದ್ ಎಣ್ಣುಚಿ. ಸಮಾಜತ್ರ ಕೂಟ್ ಕೊರುವಕಾರ ಡಾ.ಸುಭಾಷ್ ನಾಣಯ್ಯ ಅವು ತಕ್ಕ್ ಪರ್'ಂದಿತ್, ವರ್ಗತ್ರ ಪ್ರವರ್ಗ ಎ ರ ಸೌಲಭ್ಯತ್'ನ ಸೆರಿಯಾಯಿತ್ ಬಳಸಿಯೊಂಡು. ಪಡಿಪು, ಚಾಕಿರಿ ಪಿಂಞ ವಿದ್ಯಾರ್ಥಿ ವೇತನತ್ರ ಪ್ರಯೋಜನ ಪಡ್'ಂದೋಂಡ್'ಂದ್ ಎಣ್ಣುಚಿ. ಪಡಿಪು ತೀಂದದು ಉಲಗತ್'ರ ಎದೇ ಮೂಲೆಕ್ ಪೋಚೆಂಗೂ ಕೊಡವ ಪಾಜೆ ಪಿಂಞ ಸಂಸ್ಕೃತಿನ ಮರ್'ಪಕ್ಕೆಯ್ಯಂದ್ ಕೆಮಿತಕ್ಕ್ ಎಣ್ಣುಚಿ.

ಸಮಾಜತ್ರ ಗೌರವ ಕಾರ್ಯದರ್ಶಿ ತೋರೆರ ಕಾಶಿ ಕಾರ್ಯಪ್ಪ ಅಯಿಂಗ ಸಮಾಜತ್ರ ಕಟ್ಟಡ ನಿರ್ಮಣತ್ರ ಏಳಿಗೆರ ಅರಿವುನ ಸಭೆಲ್ ಅರಿಕೆ ಕೊಡ್ತತ್. ಕಟ್ಟಡ ಪಣಿ ಕಾರ್'ಬಾರ್'ಕ್ ಜನಾಂಗ ಪಣಸಾಯ ಮಾಡೊಂಡ್'ಂದ್ ಮನವಿ ಮಾಡ್'ಚಿ.

ಎಳ್ತ್'ಕಾರ್ತಿ, ನಟಿ ಪಿಂಞ ಸಿನಿಮಾ ನಿರ್ಮಾಪಕಿ ಈರಮಂಡ ಹರಿಣಿ ವಿಜಯ್ ತಕ್ಕ್ ಪರ್'ಂದಿತ್,ಉಲಗತ್ ಎಲ್ಲಿಯೂ ಕಾಂಗತ ಸಂಸ್ಕೃತಿ ನಂಗಡದ್, ಇದ್'ನ ಉಳ್'ತಿತ್ ಬೊಳ್'ತುವ ನ್'ಟ್ಟ್'ಲ್ ಸಮಾಜತ್ರ ಬಾಲೆಕಾರಂಗ ಮಿಂಞಕ್ ಬರೊಂಡು. ಉಮ್ಮತಾಟ್ ಪಿಂಞ ಬೊಳಕಾಟ್ ಪಡ್'ಪುಚಿಡುವಕ್ ನಂಗ ತಯಾರ್ ಉಂಡ್, ಪಡಿಪೊಕ್ ಇರಾದೆ ಉಳ್ಳ ಬಾಲೆಕಾರ- ಬಾಲೆಕರ್ತಿಯ ಮಿಂಞಕ್ ಬಂತ್ ತಂಗಡ ಪೆದತ್'ನ ಕೊಡ್ಕೊಲುಂದ್ ಎಣ್ಣುಚಿ. ಇದೇ ನೇರತ್ ನಿವೃತ್ತ ಯೋಧ ಮುಕ್ಕಾಟಿರ ನಾಣಯ್ಯ ಪಿಂಞ ಆರೋಗ್ಯ ಇಲಾಖೆರ ನಿವೃತ್ತ ಚಾಕಿರಿಕಾರ ನೇಂದುಮಾಡ ಸುಜ್ಯೋತಿ ಪ್ರಕಾಶ್ ಅಯಿಂಗಳ ತೊಮ್ಮಾನ ಮಾಡುಚಿ.

ಸಭೆಲ್ ಕಯಿಂಜ ಮಾಸಭೆರ ಒಕ್ಕಣೆನ ಅಂಗೀಕಾರ ಎಡ್ತಂಡಿತ್. ಗೌರವ ಕಾರ್ಯದರ್ಶಿ ತೋರೆರ ಕಾಶಿ ಕಾರ್ಯಪ್ಪ ಇವು ಲೆಕ್ಕಪರಿಶೋಧನಾ ಒಕ್ಕಣೆನ ಒಪ್ಪಚಾರ ಮಾಡ್'ಚಿ. ಆಡಳಿತ ಮಂಡಳಿರ ವರದಿನ ಪುದಿಯೊಕ್ಕಡ ರೆಮಿತ ಸುಜಯ್ ಓದ್'ಚಿ. 10 ನೇ ಕ್ಲಾಸ್'ಲ್ ಜಾಸ್ತಿ ಪಡಿಪು ಕಣಕ್ ಎಡ್ತಂಡ ತೋರೆರ ಮೋನಿಶ್ ಮುತ್ತಣ್ಣ, ಕಳ್ಳಿರ ಚೋಂದಮ್ಮ, ಪಿಯುಸಿಲ್ ಆದ್ಯ ಶ್ರೇಣಿಲ್ ಪಾಸಾನ ಮಲ್ಲಂಡ ಇಳಾ ತಂಗಮ್ಮ ಪಿಂಞ ಪದವಿ ವಿಭಾಗತ್ ಸಾಧನೆ ಮಾಡ್'ನ ಈರಮಂಡ ಕೇಸರಿ ಬೋಜಮ್ಮ ಅಯಿಂಗಕ್ ಸಮಾಜತ್ರ ದತ್ತಿನಿಧಿರ ಪುರ್'ಡ್ ಪಣ ಪಿಂಞ ಒತ್ತಾಸೆ ಪತ್ರ ಕೊಡ್ತಿತ್ ಗೌರವಿಚಿಟ್ಟತ್.

ಕಳಿಕೂಟ:- ಮಜ್ಜಣ ಮೂಂದ್'ನಾಡ್ ಸರಕಾರಿ ಪ್ರೌಢಶಾಲಾ ಪರಂಬ್'ಲ್ ನಡ್'ಂದ ಕಳಿಕೂಟತ್ ಸಿಆರ್ ಪಿ ಎಫ್ ಅಧಿಕಾರಿ ಅಮ್ಮಚಾಳಿಯಂಡ ಮುತ್ತಣ್ಣ ಉದ್ಘಾಟನೆ ಮಾಡ್'ಚಿ. ಮಕ್ಕ, ಪೊಮ್ಮಕ್ಕ ಪಿಂಞ ಆಮಕ್ಕಕಾಯಿತ್ ಬೋರೆಬೋರೆ ಕಳಿ ಚಡ್'ತ ಇಂಜತ್. ಕೊಡವ ಪಾಟ್ ಪಿಂಞ ಕೊಡವ ವಾಲಾಗಾಟ್ ಚಡ್'ತತ್ ಎಲ್ಲಡ ಗಮನ ಬಲ್ಚತ್. ಬೋರೆ ಬೋರೆ ಕಳಿಚಡ್'ತತ್ ಗೆದ್ದಯಿಂಗಕ್ ಸಮಾರೋಪ ಸಭೆಲ್ ಕೊದಿಮೊದ ಕೊಡ್ತತ್.

ಸಿದ್ದಾಪುರದಲ್ಲಿ ವಿವಿಧ ಕಾಮಗಾರಿಗೆ ಪೊನ್ನಣ್ಣ ಚಾಲನೆ...







ಸಿದ್ದಾಪುರದಿಂದ ಪಾಲಿಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಇಂದು ಸಿದ್ದಾಪುರದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು.

ವಿರಾಜಪೇಟೆ ಶಾಸಕರು ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಶ್ರೀ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು ಭೂಮಿಪೂಜೆ ನೆರವೇರಿಸಿ ಮಾತನಾಡಿ, ಈ ಬಾರಿ ಸುರಿದ ಭಾರೀ ಮಳೆಯಿಂದಾಗಿ ರಸ್ತೆ ಹದಗೆಟ್ಟಿರುವುದನ್ನು ಮನಗಂಡು, ಪ್ರತಿನಿತ್ಯ ಸಾವಿರಾರು ಜನರು ಸಂಚರಿಸುವ ಈ ರಸ್ತೆಯನ್ನು ಸುಸಜ್ಜಿತಗೊಳಿಸುವ ಉದ್ದೇಶದಿಂದ ವಿಶೇಷ ಅನುದಾನದಡಿ ರೂ. 2 ಕೋಟಿ 25 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಕಾಮಗಾರಿಯನ್ನು ಗುತ್ತಿಗೆದಾರರು ಶೀಘ್ರವಾಗಿ ಹಾಗೂ ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದ ಶಾಸಕರು, ಕಾಮಗಾರಿ ನಡೆಯುವ ಸಂದರ್ಭದಲ್ಲಿ ಸಾರ್ವಜನಿಕರೂ ಸಹ ಗುಣಮಟ್ಟದ ಬಗ್ಗೆ ಗಮನಹರಿಸಿ ಸಹಕರಿಸುವಂತೆ ಮನವಿ ಮಾಡಿದರು.

ಸಾರ್ವಜನಿಕರ ಸಹಕಾರದೊಂದಿಗೆ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗಲಿದ್ದು, ಹಂತ ಹಂತವಾಗಿ ಕ್ಷೇತ್ರದ ಎಲ್ಲಾ ರಸ್ತೆಗಳನ್ನು ಉತ್ತಮಪಡಿಸುವುದು ತಮ್ಮ ಪ್ರಮುಖ ಧ್ಯೇಯವಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಬೀಟಿಕಾಡು ಪ್ರದೇಶದಲ್ಲಿ ನೂತನ 66/11 ಕೆ.ವಿ. ವಿದ್ಯುತ್ ಪ್ರಸರಣ ಘಟಕದ ಸ್ಥಾಪನೆ ಹಾಗೂ ಹೊಸ ವಿದ್ಯುತ್ ಮಾರ್ಗದ ಅಳವಡಿಕೆ ಕಾಮಗಾರಿಗೆ ಒಟ್ಟು ₹25 ಕೋಟಿ ವೆಚ್ಚದಲ್ಲಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಶ್ರೀ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು ಇಂದು ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ, ಮಾನ್ಯ ಶಾಸಕರು, 66/11 ಕೆ.ವಿ. ಸಾಮರ್ಥ್ಯದ ಈ ವಿದ್ಯುತ್ ಪ್ರಸರಣ ಘಟಕ ಕಾರ್ಯಾರಂಭಗೊಂಡ ಬಳಿಕ ಸಿದ್ದಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎದುರಾಗುತ್ತಿರುವ ವಿದ್ಯುತ್ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮೀಣ ಭಾಗದ ಜನರಿಗೆ ಉತ್ತಮ ಹಾಗೂ ನಿರಂತರ ವಿದ್ಯುತ್ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಈ ಯೋಜನೆಗೆ ವಿಶೇಷ ಅನುದಾನ ಒದಗಿಸಿದೆ. ಇದರಿಂದ ಕೃಷಿಕರು, ಸಾರ್ವಜನಿಕರು ಹಾಗೂ ವ್ಯಾಪಾರಸ್ಥರಿಗೆ ಹೆಚ್ಚಿನ ಅನುಕೂಲವಾಗಲಿದೆ. ನೂತನ ವಿದ್ಯುತ್ ಮಾರ್ಗದ ಅಳವಡಿಕೆಯಿಂದ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸುವುದು ತಮ್ಮ ಉದ್ದೇಶವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನೂತನ ಆಟೋ ನಿಲ್ದಾಣ ಕಾಮಗಾರಿಗೂ ಭೂಮಿ ಪೂಜೆ ನೆರವೇರಿಸಿದರು.

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 17/11/26, ಮಂಗಳವಾರ 8951073556 ನಾಳಂಕೆ : ಬಿರ್ಯಾರ್ - 02, ಜೊವ್ವಾಚೆ
www.nadubadenews.com ಸಂಪಾದಕ:ಚಾಮರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ನಾಳೆಯ (17 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ
ವ್ಯಾಪಾರದಲ್ಲಿ ಹೊಸ ಪಾಲುದಾರಿಕೆಗಳು ರೂಪುಗೊಳ್ಳುವ ಸಾಧ್ಯತೆಯಿದೆ. ನಿಮ್ಮ ನಿರ್ಧಾರಗಳು ಭವಿಷ್ಯದಲ್ಲಿ ಉತ್ತಮ ಫಲ ನೀಡಲಿವೆ. ಕುಟುಂಬದ ಹಿರಿಯರ ಆರೋಗ್ಯ ಸುಧಾರಿಸಲಿದೆ.

ವೃಷಭ
ಆರ್ಥಿಕವಾಗಿ ಸ್ವಲ್ಪ ಎಚ್ಚರಿಕೆ ವಹಿಸುವುದು ಒಳಿತು. ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕಿ. ಕಚೇರಿಯಲ್ಲಿ ನಿಮ್ಮ ಕೆಲಸಕ್ಕೆ ಮೇಲಧಿಕಾರಿಗಳಿಂದ ಪ್ರಶಂಸೆ ಸಿಗಲಿದೆ.

ಮಿಥುನ
ಸೃಜನಶೀಲ ಚಿಂತನೆಗಳು ನಿಮ್ಮ ಕೆಲಸದಲ್ಲಿ ಯಶಸ್ಸು ತಂದುಕೊಡುತ್ತವೆ. ಸ್ನೇಹಿತರೊಂದಿಗೆ ಹತ್ತಿರದ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಯೋಗವಿದೆ.

ಕರ್ಕಾಟಕ
ಮನಸ್ಸಿನಲ್ಲಿ ಸಕಾರಾತ್ಮಕ ಯೋಚನೆಗಳು ತುಂಬಿರಲಿವೆ. ಸಾಂಸಾರಿಕ ಜೀವನದಲ್ಲಿ ಸಾಮರಸ್ಯ ಹೆಚ್ಚಾಗಲಿದೆ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಿಗಲಿದೆ.

ಸಿಂಹ
ನಿಮ್ಮ ನಾಯಕತ್ವದ ಗುಣಗಳನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಆರ್ಥಿಕ ಪರಿಸ್ಥಿತಿ ಬಲಗೊಳ್ಳಲಿದೆ. ಹೊಸ ಆಸ್ತಿ ಅಥವಾ ವಾಹನ ಖರೀದಿಸುವ ಬಗ್ಗೆ ಯೋಚಿಸುವಿರಿ.

ಕನ್ಯಾ
ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಿ. ಹೊರಗಿನ ಆಹಾರ ಸೇವನೆಯಿಂದ ದೂರವಿರಿ. ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲು ಸ್ವಲ್ಪ ಕಾಲಾವಕಾಶ ಬೇಕಾಗಬಹುದು.

ತುಲಾ
ಕಲೆ, ಸಾಹಿತ್ಯ ಮತ್ತು ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ವಿಶೇಷವಾದ ಗೌರವ ಸಿಗಲಿದೆ. ನಿಮ್ಮ ಸಾಮಾಜಿಕ ವಲಯ ವಿಸ್ತಾರಗೊಳ್ಳಲಿದೆ

ವೃಶ್ಚಿಕ
ದೀರ್ಘಕಾಲದಿಂದ ಬಾಕಿ ಉಳಿದಿದ್ದ ಹಣ ನಿಮ್ಮ ಕೈ ಸೇರಲಿದೆ. ವ್ಯಾಪಾರದಲ್ಲಿ ಲಾಭದಾಯಕ ವಾತಾವರಣವಿರುತ್ತದೆ. ಮನಸ್ಸು ಪ್ರಶಾಂತವಾಗಿರುತ್ತದೆ.

ಧನು
ಧಾರ್ಮಿಕ ಮತ್ತು ಆಧ್ಯಾತ್ಮಿಕ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಾಗಲಿದೆ. ದೂರ ಪ್ರಯಾಣ ಮಾಡುವ ಸಂಭವವಿದ್ದು, ಅದು ನಿಮಗೆ ಹೊಸ ಅನುಭವ ನೀಡಲಿದೆ.

ಮಕರ
ಸಹೋದ್ಯೋಗಿಗಳೊಂದಿಗೆ ಸೌಹಾರ್ದಯುತ ವಾತಾವರಣ ಕಾಪಾಡಿಕೊಳ್ಳಿ. ಆರೋಗ್ಯದ ದೃಷ್ಟಿಯಿಂದ ದಿನವು ಸಾಮಾನ್ಯವಾಗಿರಲಿದೆ. ಯೋಗ ಅಥವಾ ವ್ಯಾಯಾಮ ರೂಢಿಸಿಕೊಳ್ಳಿ.

ಕುಂಭ
ಹೊಸ ಆದಾಯದ ಮೂಲಗಳು ತೆರೆದುಕೊಳ್ಳಲಿವೆ. ಸಮಾಜದಲ್ಲಿ ನಿಮ್ಮ ಕೀರ್ತಿ ಮತ್ತು ಪ್ರತಿಷ್ಠೆ ಹೆಚ್ಚಾಗಲಿದೆ. ಮಕ್ಕಳಿಂದ ಸಂತೋಷದ ಸುದ್ದಿ ಕೇಳುವಿರಿ.

ಮೀನ
ನಿಮ್ಮ ಗುರಿಗಳನ್ನು ತಲುಪಲು ಕಠಿಣ ಪರಿಶ್ರಮ ಅಗತ್ಯ. ಗುಪ್ತ ಶತ್ರುಗಳ ಬಗ್ಗೆ ಎಚ್ಚರವಿರಲಿ. ದೇವರ ಪ್ರಾರ್ಥನೆಯಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ಘತ ಕಾಲದಲ್ಲಿ ಈ ದಿನ... 17ನವೆಂಬರ್ 2026


ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

⭐ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ದಿನ.* 1939ರಲ್ಲಿ ನಾಜಿ ಪಡೆಗಳಿಂದ ಪ್ರಾಗ್ ವಿಶ್ವವಿದ್ಯಾಲಯದಲ್ಲಿ ಹತ್ಯೆಗೀಡಾದ ವಿದ್ಯಾರ್ಥಿಗಳ ಸ್ಮರಣಾರ್ಥವಾಗಿ ಪ್ರತಿ ವರ್ಷ ನವೆಂಬರ್ 17 ರಂದು International Students' Day ಆಚರಿಸಲಾಗುತ್ತದೆ.

⭐ *1525 - ಬಾಬರ್‌ನ ಐದನೇ ಆಕ್ರಮಣ.* ಮೊಘಲ್ ದೊರೆ ಬಾಬರ್ ಭಾರತವನ್ನು ಗೆಲ್ಲುವ ಉದ್ದೇಶದಿಂದ ಸಿಂಧ್ ಮಾರ್ಗವಾಗಿ ಐದನೇ ಬಾರಿಗೆ ದೇಶವನ್ನು ಪ್ರವೇಶಿಸಿದನು.

⭐ *1915 - ವಿಷ್ಣು ಗಣೇಶ್ ಪಿಂಗಳೆ ಗಲ್ಲುಶಿಕ್ಷೆ.* ಗದರ್ ಪಕ್ಷದ ಪ್ರಮುಖ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ವಿಷ್ಣು ಗಣೇಶ್ ಪಿಂಗಳೆ ಅವರನ್ನು ಬ್ರಿಟಿಷ್ ಸರ್ಕಾರವು ಪುಣೆಯ ತಳೇಗಾಂವ್ ಜೈಲಿನಲ್ಲಿ ಗಲ್ಲಿಗೇರಿಸಿತು.

⭐ *1928 - ಲಾಲಾ ಲಜಪತ್ ರಾಯ್ ನಿಧನ.* 'ಪಂಜಾಬ್ ಕೇಸರಿ' ಎಂದೇ ಖ್ಯಾತರಾಗಿದ್ದ ಮಹಾನ್ ಸ್ವಾತಂತ್ರ್ಯ ಹೋರಾಟಗಾರ Lala Lajpat Rai ಅವರು ಸೈಮನ್ ಆಯೋಗದ ವಿರುದ್ಧದ ಪ್ರತಿಭಟನೆಯ ವೇಳೆ ಪೊಲೀಸರ ಲಾಠಿ ಏಟಿನಿಂದ ತೀವ್ರವಾಗಿ ಗಾಯಗೊಂಡು ಇಹಲೋಕ ತ್ಯಜಿಸಿದರು

⭐ *1932 - ಮೂರನೇ ದುಂಡುಮೇಜಿನ ಪರಿಷತ್ತು. ಲಂಡನ್‌ನಲ್ಲಿ ಬ್ರಿಟಿಷ್* ಸರ್ಕಾರವು ಆಯೋಜಿಸಿದ್ದ Third Round Table Conference ಆರಂಭವಾಯಿತು, ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇದನ್ನು ಬಹಿಷ್ಕರಿಸಿತು.

⭐ *1947 - ಜಿ.ವಿ. ಮಾವಲಂಕರ್ ಆಯ್ಕೆ.* ಸ್ವತಂತ್ರ ಭಾರತದ ಸಂವಿಧಾನ ಸಭೆಯು ಮೊದಲ ಬಾರಿಗೆ ಶಾಸಕಾಂಗವಾಗಿ ಸಭೆ ಸೇರಿತು ಮತ್ತು ಗಣೇಶ್ ವಾಸುದೇವ್ ಮಾವಲಂಕರ್ ಅವರನ್ನು ಮೊದಲ ಸ್ಪೀಕರ್ ಆಗಿ ಆಯ್ಕೆ ಮಾಡಲಾಯಿತು.

⭐ *1966 - ರೀಟಾ ಫಾರಿಯಾ ವಿಶ್ವ ಸುಂದರಿ.* ಭಾರತದ ವೈದ್ಯಕೀಯ ವಿದ್ಯಾರ್ಥಿನಿ ರೀಟಾ ಫಾರಿಯಾ ಅವರು ಲಂಡನ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 'ಮಿಸ್ ವರ್ಲ್ಡ್' ಕಿರೀಟವನ್ನು ಮುಡಿಗೇರಿಸಿಕೊಂಡರು. ಈ ಪ್ರತಿಷ್ಠಿತ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಮತ್ತು ಏಷ್ಯನ್ ಮಹಿಳೆ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.

⭐ *2012 - ಬಾಳಾ ಠಾಕ್ರೆ ನಿಧನ.* ಮಹಾರಾಷ್ಟ್ರದ ಪ್ರಭಾವಿ ರಾಜಕಾರಣಿ ಮತ್ತು ಶಿವಸೇನೆ ಪಕ್ಷದ ಸಂಸ್ಥಾಪಕ ಬಾಳಾ ಸಾಹೇಬ್ ಠಾಕ್ರೆ ಅವರು ಮುಂಬೈನಲ್ಲಿ ನಿಧನರಾದರು.

⭐ *1558 - ರಾಣಿ ಒಂದನೇ ಎಲಿಜಬೆತ್ ಪಟ್ಟಾಭಿಷೇಕ.* ರಾಣಿ ಮೇರಿ ನಿಧನದ ನಂತರ ಒಂದನೇ ಎಲಿಜಬೆತ್ ಇಂಗ್ಲೆಂಡ್‌ನ ರಾಣಿಯಾಗಿ ಸಿಂಹಾಸನವೇರಿದರು, ಇದರಿಂದ ಇಂಗ್ಲೆಂಡ್‌ನ ಸುವರ್ಣ ಯುಗವಾದ 'ಎಲಿಜಬೆತನ್ ಯುಗ' ಆರಂಭವಾಯಿತು

⭐ *1800 - ಅಮೆರಿಕನ್ ಕಾಂಗ್ರೆಸ್ ಮೊದಲ ಅಧಿವೇಶನ.* ಅಮೆರಿಕದ ಹೊಸ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಯ ಕ್ಯಾಪಿಟಲ್ ಕಟ್ಟಡದಲ್ಲಿ ಅಮೆರಿಕನ್ ಕಾಂಗ್ರೆಸ್ ತನ್ನ ಮೊದಲ ಅಧಿವೇಶನವನ್ನು ನಡೆಸಿತು

⭐ *1869 - ಸೂಯೆಜ್ ಕಾಲುವೆ ಉದ್ಘಾಟನೆ.* ಮೆಡಿಟರೇನಿಯನ್ ಸಮುದ್ರ ಮತ್ತು ಕೆಂಪು ಸಮುದ್ರವನ್ನು ಸಂಪರ್ಕಿಸುವ Suez Canal ಅನ್ನು ಹತ್ತು ವರ್ಷಗಳ ನಿರ್ಮಾಣದ ನಂತರ ಜಾಗತಿಕ ಹಡಗು ಸಂಚಾರಕ್ಕೆ ಮುಕ್ತಗೊಳಿಸಲಾಯಿತು.

⭐ *1970 - ಕಂಪ್ಯೂಟರ್ ಮೌಸ್‌ಗೆ ಪೇಟೆಂಟ್.* ಅಮೆರಿಕನ್ ಎಂಜಿನಿಯರ್ ಡೌಗ್ಲಾಸ್ ಎಂಗೆಲ್‌ಬಾರ್ಟ್ ಅವರು ತಾವು ಆವಿಷ್ಕರಿಸಿದ ಮೊದಲ ಕಂಪ್ಯೂಟರ್ ಮೌಸ್‌ಗೆ ಅಧಿಕೃತವಾಗಿ ಪೇಟೆಂಟ್ ಪಡೆದುಕೊಂಡರು.

⭐ *1970 - ಲೂನಾ 17 ಚಂದ್ರಯಾನ.* ಸೋವಿಯತ್ ಒಕ್ಕೂಟದ ಮಾನವರಹಿತ ಬಾಹ್ಯಾಕಾಶ ನೌಕೆ 'ಲೂನಾ 17' ಚಂದ್ರನ ಮೇಲ್ಮೈಯಲ್ಲಿ ಯಶಸ್ವಿಯಾಗಿ ಇಳಿದು, ಮೊದಲ ರೋವರ್ 'ಲುನೋಖೋಡ್ 1' ಅನ್ನು ನಿಯೋಜಿಸಿತು.

⭐ *1989 - ವೆಲ್ವೆಟ್ ಕ್ರಾಂತಿ ಆರಂಭ.* ಜೆಕೊಸ್ಲೊವಾಕಿಯಾದ ಪ್ರಾಗ್‌ನಲ್ಲಿ ವಿದ್ಯಾರ್ಥಿಗಳು ನಡೆಸಿದ ಶಾಂತಿಯುತ ಪ್ರತಿಭಟನೆಯು 'ವೆಲ್ವೆಟ್ ಕ್ರಾಂತಿ'ಗೆ ನಾಂದಿ ಹಾಡಿತು, ಇದು ಅಂತಿಮವಾಗಿ ಅಲ್ಲಿನ ಕಮ್ಯುನಿಸ್ಟ್ ಆಡಳಿತವನ್ನು ಕೊನೆಗೊಳಿಸಿತು.

ಉದ್ಯೋಗ ಮಾಹಿತಿ...

. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - FDA & SDA ಬೃಹತ್ ನೇಮಕಾತಿ)
* ಹುದ್ದೆಗಳ ವಿವರ: ಪ್ರಥಮ ದರ್ಜೆ ಸಹಾಯಕರ (FDA), ದ್ವಿತೀಯ ದರ್ಜೆ ಸಹಾಯಕರ (SDA), ಅಕೌಂಟ್ಸ್ ಅಸಿಸ್ಟೆಂಟ್ ಹಾಗೂ ವಾರ್ಡನ್ ಹುದ್ದೆಗಳು.
* ಖಾಲಿ ಹುದ್ದೆಗಳು: ಒಟ್ಟು 5,431 ಹುದ್ದೆಗಳು (ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವಲಯ).
* ವಿದ್ಯಾರ್ಹತೆ: 2ನೇ ಪಿಯುಸಿ (PUC) ಅಥವಾ ಯಾವುದೇ ಮಾನ್ಯತೆ ಪಡೆದ ಪದವಿ (Degree).
* ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 34,100 ರಿಂದ ರೂ. 92,500+ ವರೆಗೆ.
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026 (ಶುಲ್ಕ ಪಾವತಿಗೆ 26 ನವೆಂಬರ್ 2026).
* ಅಧಿಕೃತ ವೆಬ್‌ಸೈಟ್: https://cetonline.karnataka.gov.in

2. ಇಂಡಿಯನ್ ಬ್ಯಾಂಕ್ (Indian Bank Apprentice Recruitment 2026)
* ಹುದ್ದೆಗಳ ವಿವರ: ಗ್ರಾಹಕ ಸೇವಾ ಅಪ್ರೆಂಟಿಸ್ Apprentice) ಹುದ್ದೆಗಳು (ಕರ್ನಾಟಕ ವಲಯ 1 ಸೇರಿದಂತೆ ಅಖಿಲ ಭಾರತ ಮಟ್ಟದಲ್ಲಿ).
* ಖಾಲಿ ಹುದ್ದೆಗಳು: 1,500 ಹುದ್ದೆಗಳು.
* ವಿದ್ಯಾರ್ಹತೆ: ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ (Degree).
* ಸಂಬಳ: ಮಾಸಿಕ ಸ್ಟೈಫಂಡ್ ರೂ. 15,000 (1 ವರ್ಷದ ಅವಧಿಗೆ).
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026.
* ಅಧಿಕೃತ ವೆಬ್‌ಸೈಟ್: https://www.indianbank.in

3. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Junior Engineer & Technical Posts)
*** ಹುದ್ದೆಗಳ ವಿವರ: ಅಸಿಸ್ಟೆಂಟ್ ಟೌನ್ ಪ್ಲಾನರ್,** ಕಿರಿಯ ಇಂಜಿನಿಯರ್ (Junior Engineer - Civil) ಹಾಗೂ ಡ್ರಾಫ್ಟ್‌ಸ್ಮನ್ ಹುದ್ದೆಗಳು.
* ಖಾಲಿ ಹುದ್ದೆಗಳು: 218 ಹುದ್ದೆಗಳು (RPC ಮತ್ತು ಕಲ್ಯಾಣ ಕರ್ನಾಟಕ).
* ವಿದ್ಯಾರ್ಹತೆ: ಸಿವಿಲ್ ಇಂಜಿನಿಯರಿಂಗ್ ಅಥವಾ ಸಂಬಂಧಿತ ಟ್ರೇಡ್‌ನಲ್ಲಿ ಡಿಪ್ಲೊಮಾ (Diploma).
* ಸಂಬಳ: ರೂ. 54,175 ರಿಂದ ರೂ. 99,400
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26 ನವೆಂಬರ್ 2026.
* ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea

4. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Female Supervisor Recruitment)
* ಹುದ್ದೆಗಳ ವಿವರ: ಮಹಿಳಾ ಮೇಲ್ವಿಚಾರಕಿ (Female Supervisor - Group-C) ಹುದ್ದೆಗಳು.
* ಖಾಲಿ ಹುದ್ದೆಗಳು: 141 ಹುದ್ದೆಗಳು.
* ವಿದ್ಯಾರ್ಹತೆ: ಸಂಬಂಧಿತ ವಿಷಯದಲ್ಲಿ ಪದವಿ ಅಥವಾ ಸರ್ಕಾರದ ನಿಯಮಾನುಸಾರ ವಿದ್ಯಾರ್ಹತೆ.
* ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ಆಕರ್ಷಕ ವೇತನ ಹಾಗೂ ಭತ್ಯೆಗಳು.
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28 ನವೆಂಬರ್ 2026.
* ಅಧಿಕೃತ ವೆಬ್‌ಸೈಟ್: https://cetonline.karnataka.gov.in

ಕಲೆ ಮತ್ತು ಸಾಹಿತ್ಯ ಮನಸನ್ನು ಅರಳಿಸಬಲ್ಲ ದಿವ್ಯ ಔಷಧ; ಟಿಆರ್. ಮೈಥಿಲಿರಾವ್...



@NadubadeNews; ನ.17 ವಿರಾಜಪೇಟೆ: ಕಲೆ, ಸಾಹಿತ್ಯ ಮತ್ತು ಸಂಗೀತವು ಮನುಷ್ಯನ ಮನಸ್ಸನ್ನು ಅರಳಿಸುವ ದಿವ್ಯ ಔಷಧಿಯಾಗಿದ್ದು, ಇಂದಿನ ಮಕ್ಕಳು ಕೇವಲ ಪಠ್ಯಪುಸ್ತಕದ ಅಂಕಗಳಿಗೆ ಮಾತ್ರ ಸೀಮಿತವಾಗದೆ ಕ್ರೀಡೆ, ಸಂಗೀತ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ಎಸ್.ಎಂ.ಎಸ್. ಸಂಸ್ಥೆಯ ಶಿಕ್ಷಕಿ ಎಚ್. ಮೈಥಿಲೀ ರಾವ್ ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಪ್ರಸಾದ ಭವನದಲ್ಲಿ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 'ಹೊಂಬೆಳಕು ಕಿರಣ 249' ಮಾಸಿಕ ತತ್ತ್ವಚಿಂತನಾಗೋಷ್ಠಿ ಹಾಗೂ ಭಕ್ತಿಸಿಂಚನ 'ದಾಸ-ವಚನ-ರಸಧಾರೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಂಗೀತಕ್ಕೆ ಕಲ್ಲನ್ನೂ ಕರಗಿಸುವ ಶಕ್ತಿಯಿದ್ದು, ಅದು ಏಕಾಗ್ರತೆ ಮತ್ತು ಸಂಸ್ಕಾರವನ್ನು ಬೆಳೆಸುತ್ತದೆ ಎಂದ ಅವರು, 'ಕಾವ್ಯ ಕುಂಚ' ಗಾಯನದ ವಿಶಿಷ್ಟ ಪ್ರಯೋಗದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಸಾಹಿತ್ಯವು ಬದುಕಿನ ಕೈಗನ್ನಡಿಯಾಗಿದ್ದು, ಪುಸ್ತಕಗಳನ್ನು ಓದುವ ಹವ್ಯಾಸದಿಂದ ಮಕ್ಕಳಲ್ಲಿ ಆಲೋಚನಾ ಶಕ್ತಿ ಮತ್ತು ಸೃಜನಶೀಲತೆ ಹೆಚ್ಚುತ್ತದೆ. ಕ್ರೀಡೆಯು ದೈಹಿಕ ಸದೃಢತೆ ಹಾಗೂ ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ಕಲಿಸಿದರೆ, ಕಲೆ ಮತ್ತು ಸಾಹಿತ್ಯ ಜೀವನಕ್ಕೆ ಪರಿಪೂರ್ಣತೆಯನ್ನು ನೀಡುತ್ತವೆ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು. ಇದೇ ವೇಳೆ ಅವರು ಸ್ವತಃ ಗವಾಯಿಗಳ ಭಕ್ತಿ ಕೀರ್ತನೆ ಹಾಗೂ ವಚನಗಳನ್ನು ಸುಶ್ರಾವ್ಯವಾಗಿ ಹಾಡಿ ಸಭಿಕರ ಮನಸೂರೆಗೊಂಡರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಅರಮೇರಿ ಕಳಂಚೇರಿ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿಗಳು ಆಶೀರ್ವಚನ ನೀಡಿ, ಪ್ರಸ್ತುತ ಸಮಾಜದಲ್ಲಿ ವಿದ್ಯಾರ್ಥಿಗಳ ದಿಕ್ಕು ತಪ್ಪುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.
ಇಂದಿನ ವಿದ್ಯಾರ್ಥಿಗಳು ಮೊಬೈಲ್, ಸಾಮಾಜಿಕ ಜಾಲತಾಣಗಳ ಅತಿಯಾದ ವ್ಯಾಮೋಹಕ್ಕೆ ಒಳಗಾಗಿ ತಮ್ಮ ಅಮೂಲ್ಯ ಸಮಯ ಹಾಗೂ ಏಕಾಗ್ರತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಅಂಕ ಗಳಿಸುವ ಯಂತ್ರಗಳಾಗುವ ಭರದಲ್ಲಿ ಸಂವೇದನೆ, ಸಹನೆ ಮತ್ತು ಹಿರಿಯರ ಮೇಲಿನ ಗೌರವವನ್ನು ಮರೆಯುತ್ತಿದ್ದಾರೆ. ಕೇವಲ ಭೌತಿಕ ಸುಖದ ಹಿಂದೆ ಬೀಳದೆ, ನಮ್ಮ ಪರಂಪರೆ, ಕಲೆ ಮತ್ತು ಸಾಹಿತ್ಯದ ಸಾರವನ್ನು ಸರಿಯಾಗಿ ಅರ್ಥೈಸಿಕೊಂಡು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ನೈತಿಕ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದ ಸ್ವಾಮೀಜಿಗಳು, ಕೇವಲ ಉದ್ಯೋಗ ಗಿಟ್ಟಿಸಿಕೊಳ್ಳುವುದು ಶಿಕ್ಷಣವಲ್ಲ, ಯಾವ ಶಿಕ್ಷಣವು ಮನುಷ್ಯನನ್ನು ವಿನಯವಂತನನ್ನಾಗಿ ಮಾಡುತ್ತದೆಯೋ ಗುರು-ಹಿರಿಯರನ್ನು ಗೌರವಿಸುವುದನ್ನು ಕಲಿಸುತ್ತದೆಯೋ ಅದೇ ನಿಜವಾದ ನೈತಿಕ ಶಿಕ್ಷಣ. ಮನೆಯೇ ಮೊದಲ ಪಾಠಶಾಲೆಯಾಗಿದ್ದು, ಪೋಷಕರು ತಮ್ಮ ಮಕ್ಕಳಿಗೆ ಕೇವಲ ಹಣ ಮತ್ತು ಸೌಲಭ್ಯಗಳನ್ನು ನೀಡಿದರೆ ಸಾಲದು; ಪ್ರತಿದಿನ ಮನೆಗಳಲ್ಲಿ ಒಟ್ಟಿಗೆ ಕುಳಿತು ಮಾತನಾಡುವ, ಒಳ್ಳೆಯ ವಿಚಾರಗಳನ್ನು ಹಂಚಿಕೊಳ್ಳುವ ಸಂಸ್ಕಾರ ಬೆಳೆಸಬೇಕು. 12ನೇ ಶತಮಾನದ ಬಸವಾದಿ ಶರಣರ ವಚನಗಳು ಹಾಗೂ ಹರಿದಾಸರ ಸಾಹಿತ್ಯಗಳು ಇಡೀ ಮನುಕುಲಕ್ಕೆ ದಾರಿದೀಪವಾಗಬಲ್ಲ ಜೀವನ ಸಂವಿಧಾನಗಳಾಗಿವೆ. ಮನೆಮನೆಗಳಲ್ಲಿ ವಚನ ಮತ್ತು ದಾಸರ ಪದಗಳ ಗಾಯನ ನಿರಂತರವಾಗಿ ನಡೆಯುವುದರಿಂದ ಮಕ್ಕಳಲ್ಲಿ ನೈತಿಕ ಪ್ರಜ್ಞೆ ಜಾಗೃತಗೊಂಡು, ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಹೆಸರಾಂತ ಗಾಯಕ ಹೆಡತಲೆ ನಾರಾಯಣ ಅವರು ನಡೆಸಿಕೊಟ್ಟ 'ದಾಸ-ವಚನ-ರಸಧಾರೆ' ನೆರೆದಿದ್ದ ಕಲಾರಸಿಕರನ್ನು ಭಕ್ತಿಪರವಶರನ್ನಾಗಿಸಿತು. ದಾಸ ಸಾಹಿತ್ಯದಲ್ಲಿ ಅಡಗಿರುವ ಜೀವನ ಮೌಲ್ಯಗಳು, ಸಾಮಾಜಿಕ ಕಳಕಳಿ ಮತ್ತು ವಚನ ಸಾಹಿತ್ಯದ ಆಶಯಗಳನ್ನು ತಮ್ಮ ಭಾವಪೂರ್ಣ ಗಾಯನದ ಮೂಲಕ ಕಟ್ಟಿಕೊಟ್ಟು ಸಂಗೀತದ ರಸದೌತಣ ನೀಡಿದರು.

ಸಮಾರಂಭದಲ್ಲಿ ಖ್ಯಾತ ಪಕ್ಷಿ ತಜ್ಞ ಹಾಗೂ ಕಾರ್ಯಕ್ರಮದ ರುವಾರಿಗಳಾದ ಡಾ. ನರಸಿಂಹನ್, ಶಿಕ್ಷಕಿ ಚೈತ್ರಾ, ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೇಶವ ಕಾಮತ್, ಮಠದ ಭಕ್ತರಾದ ಚಂದನ್ ಕಾಮತ್, ಶ್ರೀಕಾಂತ್ ರಾವ್, ಬೆಟ್ಟಳ್ಳಿಯ ಕೃಷಿಕರಾದ ತಿಮ್ಮಪ್ಪಯ್ಯ, ಆಶಾ ತಿಮ್ಮಪ್ಪಯ್ಯ, ಗಾಂಧಿನಗರದ ಸುಧಾಕರ್, ಸೀತಾಲಕ್ಷ್ಮಿ, ಸಾಹಿತಿ ಗಿರೀಶ್ ಕಿಗ್ಗಾಲು, ನಿವೃತ್ತ ಮುಖ್ಯೋಪಾಧ್ಯಾಯರು, ಯೋಗ ಗುರುಗಳಾದ ಪಿ.ಎ. ಲಕ್ಷ್ಮಿನಾರಾಯಣ, ರಜಿತ ಕಾರ್ಯಪ್ಪ, ಡಿ.ಮಂಜುನಾಥ್, ವಿದ್ಯಾರ್ಥಿಗಳಾದ ಕುಮಾರಿ ಸೋನಾ, ಅಭಿನವ್, ಧೀರಜ್ ಸೇರಿದಂತೆ

ನಡುಬಾಡೆ ಇ-ಪತ್ರಿಕೆ
ASDCA No: SCAB1312025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 17/11/26, ಮಂಗಳವಾರ 8951073556 ನಾಳಂಕೆ : ಬಿರ್ಜ್ಯಾರ್ - 02, ಜೊವ್ವಾಬೆ
www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಳಪ್ಪ nadubadenews@gmail.com @nadubadenews

ಬಿಸಿಯೂಟದ ಸೆಂಟ್ರಲ್ ಕ್ಲಸ್ಟರ್ ಕಿಚನ್ ಪ್ರಸ್ತಾವನೆ ಕೈಬಿಡಲು ಆಗ್ರಹ; ವೇತನ ಕಡಿತ ಖಂಡಿಸಿ ಪ್ರತಿಭಟನೆ



@NadubadeNews;ನ.17;

ವಿರಾಜಪೇಟೆ: ಶಾಲಾ ಬಿಸಿಯೂಟ ಯೋಜನೆಗೆ ಸೆಂಟ್ರಲ್ ಕ್ಲಸ್ಟರ್ ಕಿಚನ್ ರಚಿಸುವ ಶಿಕ್ಷಣ ಇಲಾಖೆಯ ಪ್ರಸ್ತಾವನೆಯನ್ನು ಕೈಬಿಡಬೇಕು ಹಾಗೂ ಬಿಸಿಯೂಟದ ಸಂಪೂರ್ಣ ಜವಾಬ್ದಾರಿಯನ್ನು ಈಗಿರುವ ಅಡುಗೆ ಸಿಬ್ಬಂದಿಗೆ ವಹಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) ವತಿಯಿಂದ ವಿರಾಜಪೇಟೆ ತಹಶೀಲ್ದಾರ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ರಾಜ್ಯಾದ್ಯಂತ ಬಿಸಿಯೂಟ ನೌಕರರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕಳೆದ ಮೂರ್ನಾಲ್ಕು ತಿಂಗಳಿಂದ ವೇತನ ಪಾವತಿಯಾಗಿರಲಿಲ್ಲ. ಇತ್ತೀಚೆಗೆ ವೇತನ ಬಿಡುಗಡೆ ಮಾಡಿದ್ದರೂ, ಅದರಲ್ಲಿ ಸಾವಿರಾರು ರೂಪಾಯಿಗಳನ್ನು ಅನಗತ್ಯವಾಗಿ ಕಡಿತಗೊಳಿಸಿ ಖಾತೆಗೆ ಜಮೆ ಮಾಡಲಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಸಿ. ಕುಸುಮಾ, ಪೊನ್ನಂಪೇಟೆ ತಾಲೂಕು ಅಧ್ಯಕ್ಷೆ ಶ್ವೇತಾ ಹಾಗೂ ವಿರಾಜಪೇಟೆ ತಾಲೂಕು ಅಧ್ಯಕ್ಷೆ ಉಮೇಶ್ವರಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಹಾಗೂ ಪೊನ್ನಂಪೇಟೆ ತಾಲೂಕು ಅಕ್ಷರ ದಾಸೋಹ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ಜಿಲ್ಲಾ ಅಧ್ಯಕ್ಷ ಸಾಬು, ರಾಜ್ಯದಾದ್ಯಂತ ಬಿಸಿಯೂಟ ನೌಕರರು ಅತ್ಯಂತ ಕಡಿಮೆ ಗೌರವಧನದಲ್ಲಿ ದುಡಿಯುತ್ತಿದ್ದರೂ ಸರ್ಕಾರ ಸಕಾಲಕ್ಕೆ ವೇತನ ನೀಡದೆ ಸತಾಯಿಸುತ್ತಿದೆ. ಮೂರ್ನಾಲ್ಕು ತಿಂಗಳ ಬಾಕಿ ವೇತನವನ್ನು ಒಟ್ಟಿಗೆ ಬಿಡುಗಡೆ ಮಾಡುವಾಗಲೂ ಕಡಿತಗೊಳಿಸಿರುವುದು ನೌಕರರ ಬದುಕಿನ ಜೊತೆ ಚೆಲ್ಲಾಟವಾಡಿದಂತಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆ ಕಷ್ಟವಾಗಿರುವ ಸಂದರ್ಭದಲ್ಲಿ ಸೆಂಟ್ರಲ್ ಕ್ಲಸ್ಟರ್ ಕಿಚನ್ ಹೆಸರಿನಲ್ಲಿ ನೌಕರರನ್ನು ಕೆಲಸದಿಂದ ತೆಗೆದುಹಾಕುವ ಪ್ರಯತ್ನ ನಡೆಯುತ್ತಿದೆ. ಸರ್ಕಾರ ಕೂಡಲೇ ವೇತನ ಕಡಿತ ಸರಿಪಡಿಸಿ ಬಾಕಿ ಹಣ ಬಿಡುಗಡೆ ಮಾಡಬೇಕು ಹಾಗೂ ಕ್ಲಸ್ಟರ್ ಕಿಚನ್ ಪ್ರಸ್ತಾವನೆಯನ್ನು ಕೈಬಿಡಬೇಕು ಎಂದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಸಿ. ಕುಸುಮಾ ಮಾತನಾಡಿ, 2001ರಲ್ಲಿ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಜಾರಿಗೆ ಬಂದ ಬಿಸಿಯೂಟ ಯೋಜನೆಯಡಿ ಮಕ್ಕಳಿಗೆ ಅವರಿರುವ ಶಾಲೆಗಳಲ್ಲಿಯೇ ತಾಜಾ ಹಾಗೂ ಬಿಸಿಯಾದ ಪೌಷ್ಟಿಕ ಆಹಾರ ನೀಡಬೇಕೆಂಬ ನಿಯಮವಿದೆ. ಇದಕ್ಕಾಗಿ ಸರ್ಕಾರ ಶಾಲೆಗಳಲ್ಲಿ ಅಡುಗೆ ಕೋಣೆ ಹಾಗೂ ಅಗತ್ಯ ಪಾತ್ರೆಗಳನ್ನು ಒದಗಿಸಿದೆ. 2012ರ ಸುತ್ತೋಲೆಯ ಪ್ರಕಾರ ಬಿಸಿಯೂಟ ಯೋಜನೆಯನ್ನು ಸ್ವಯಂಸೇವಾ ಸಂಸ್ಥೆಗಳಿಗೆ ವಹಿಸುವುದನ್ನು ನಿಷೇಧಿಸಲಾಗಿದೆ. ಆದರೂ ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ ಯೋಜನೆಯಡಿ ನವೆಂಬರ್ 7ರಂದು ಶಾಲಾ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಕ್ಲಸ್ಟರ್ ಕಿಚನ್ ರಚನೆ ಕುರಿತು ಅಭಿಪ್ರಾಯ ಕೋರಿ ಜಿಲ್ಲೆಗಳ ಉಪನಿರ್ದೇಶಕರಿಗೆ ಪತ್ರ ಬರೆದಿರುವುದು ಖಂಡನೀಯ. ಈ ಪ್ರಸ್ತಾವನೆಯು ಮುಂದೆ ಖಾಸಗಿ ಸಂಸ್ಥೆಗಳು ಹಾಗೂ ವಿವಿಧ ಸಂಘಟನೆಗಳಿಗೆ ಯೋಜನೆಯನ್ನು ವಹಿಸುವ ಉದ್ದೇಶ ಹೊಂದಿದೆ ಎಂದು ಆತಂಕ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ವಿರಾಜಪೇಟೆ ತಾಲೂಕು ಅಧ್ಯಕ್ಷೆ ಉಮೇಶ್ವರಿ, ಪೊನ್ನಂಪೇಟೆ ತಾಲೂಕು ಅಧ್ಯಕ್ಷೆ ಶ್ವೇತಾ ಸೇರಿದಂತೆ ಅಕ್ಷರ ದಾಸೋಹ ನೌಕರರು, ಶಾಜಿ ರಮೇಶ್, ಸಾದಿಕ್ ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಪಾಲ್ಗೊಂಡಿದ್ದರು.

ಸಿಐಪಿಯು ಕಾಲೇಜಿನಲ್ಲಿ 71ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಜಾನಪದ ವಸ್ತು ಪ್ರದರ್ಶನ ಸ್ಪರ್ಧೆ



@NadubadeNews;ನ.17; ವಿರಾಜಪೇಟೆ: 71ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪೊನ್ನಂಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಪಿ.ಯು. ಕಾಲೇಜಿನಲ್ಲಿ ಜಾನಪದ ವಸ್ತು ಪ್ರದರ್ಶನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಕನ್ನಡ ಸಂಸ್ಕೃತಿಯ ಮೂಲವೇ ಜಾನಪದ. ನಮ್ಮ ಹಿರಿಯ ಜನಪದರು ಅನುಸರಿಸಿಕೊಂಡು ಬಂದ ಜೀವನಶೈಲಿ ಆಚಾರ-ವಿಚಾರಗಳು, ಸಂಪ್ರದಾಯಗಳು, ನಂಬಿಕೆಗಳು ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ವಿವಿಧ ಜಾನಪದ ವಸ್ತುಗಳನ್ನು ಪ್ರದರ್ಶಿಸುವ ಮೂಲಕ ನಮ್ಮ ನಾಡಿನ ಶ್ರೀಮಂತ ಜನಪದ ಸಂಸ್ಕೃತಿ ಮತ್ತು ಪರಂಪರೆಯನ್ನು ಅನಾವರಣಗೊಳಿಸಿದರು.

ಕಾರ್ಯಕ್ರಮಕ್ಕೆ ಕಾಲೇಜಿನ ಪ್ರಾಂಶುಪಾಲೆ ಡಾ. ರೋಹಿಣಿ ತಿಮ್ಮಯ್ಯ ಚಾಲನೆ ನೀಡಿದರು. ಸ್ಪರ್ಧೆಯ ತೀರ್ಪುಗಾರರಾಗಿ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪ್ರೊ. ಅನುರಾಧ ಪಿ.ಜೆ., ಗಣಿತಶಾಸ್ತ್ರ ವಿಭಾಗದ ಉಪನ್ಯಾಸಕಿ ಲತಾ ಕುಮಾರಿ, ಜೀವಶಾಸ್ತ್ರ ವಿಭಾಗದ ಉಪನ್ಯಾಸಕಿ ರಜನಿ ಪೊನ್ನಪ್ಪ ಹಾಗೂ ಲೆಕ್ಕಶಾಸ್ತ್ರ ವಿಭಾಗದ ಉಪನ್ಯಾಸಕಿ ನಿರ್ಮಲ ಅವರು ಕಾರ್ಯನಿರ್ವಹಿಸಿದರು.

ಹಾರಂಗಿ ಜಲಕ್ರೀಡೆಯಿಂದ ವಿಷತೈಲದಿಂದ ಅಪಾಯ ಆತಂಕ



@NadubadeNews;ನ.17;

ಕುಶಾಲನಗರ:- ಹಾರಂಗಿಯ ಹಿನ್ನಿರಿನಲ್ಲಿ ನಡೆಯುತ್ತಿರುವಂತಹ ಜಲ ಕ್ರೀಡೆಯು ಪ್ರವಾಸಿಗರಿಗೆ ಸಂತೋಷವನ್ನುಂಟು ಮಾಡುತ್ತಿದ್ದರೆ ಮತ್ತೊಂದೆಡೆ ಮಾರಕವಾಗುತ್ತಿದೆ. ಆದರೆ ಜಲ ಕ್ರೀಡೆ ನಡೆಯುವ ಬೊಟ್ ಗಳಲ್ಲಿ (ಆಯಿಲ್) ತೈಲ ಸೊರಿಕೆಯಾಗಿ ಕಾವೇರಿ ಮಾತೆಯಒಡಲು ಸೇರುತ್ತಿದೆ. ಮತ್ತು ಕಾಡಲ್ಲಿರುವಂತಹ ಪ್ರಾಣಿಗಳಿಗೆ ವಿಷಪೂರಿತ ನೀರು ಕುಡಿದಂತಾಗುತ್ತಿದೆ. ದಯಮಾಡಿ ಅಧಿಕಾರಿಗಳು ಇತ್ತ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ಕೆ.ಎಂ.ಎ. ವತಿಯಿಂದ ವಿದ್ಯಾರ್ಥಿ ವೇತನ, ಸನ್ಮಾನ ಕಾರ್ಯಕ್ರಮ...

@Nadubadenews; ನ.17; ವಿರಾಜಪೇಟೆ: ಕೊಡವ ಮುಸ್ಲಿಂ ಅಸೋಷಿಯೇಷನ್ ವತಿಯಿಂದ ಜಿಲ್ಲೆಯ ವಿವಿಧ ಸಾಧಕ ವಿದ್ಯಾರ್ಥೀಗಳಿಗೆ ವಿದ್ಯಾರ್ಥಿವೇಖುತನ ನೀಡಿ ಗೌರವಿಸಲಾಯಿತು. ಸಂಸ್ಥೆಯ ಅಧಯಕ್ಷ ದುದ್ದಿಯಂಡ ಸೂಫಿ ಹಾಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಕೆಳಗಿನಂತೆ ಪುರಷ್ಕಾರ ನೀಡಲಾಯಿತು.

ಕೆಎಂಎ ಕನ್ನಡ ಚೈತನ್ಯ ಪುರಸ್ಕಾರ-2026': ಕೊಡಗು ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ಓದಿ ಕಳೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಕನ್ನಡ ವಿಷಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗಾಗಿ ಡಿ.ಹೆಚ್. ಸೂಫಿಯವರು ತಮ್ಮ ಪೋಷಕರಾದ ದಿವಂಗತ ಡಿ.ಪಿ. ಹುಸೇನಾರ್ ಹಾಜಿ ಮತ್ತು ಆಮೀನಾ ಅವರ ಸ್ಮರಣಾರ್ಥವಾಗಿ ಪ್ರಾಯೋಜಿಸಿರುವ ಈ ಪ್ರಶಸ್ತಿಯನ್ನು 125ಕ್ಕೆ 125 ಅಂಕಗಳನ್ನು ಪಡೆದ ಮಾಲ್ದಾರೆ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿದ್ದ ಸಿದ್ಧಾಪುರದ ಸಮೀಪದ ಕರಡಗೋಡು ಗ್ರಾಮದ ಎಸ್. ಕೌಸಲ್ಯಾ ಹಾಗೂ 125ಕ್ಕೆ 123 ಅಂಕಗಳನ್ನು ಪಡೆದ ಹೊದವಾಡದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯಾಗಿದ್ದ ಹೊದವಾಡದ ಕೆ.ಎಂ. ಫಾತಿಮತ್ ಸಹ್ಲ ಅವರಿಗೆ ಪ್ರದಾನ ಮಾಡಲಾಯಿತು.

ವಿಶೇಷ ಶೈಕ್ಷಣಿಕ ಪುರಸ್ಕಾರ (ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಜಿಲ್ಲೆಗೆ ಪ್ರಥಮ): 2025-26 ಶೈಕ್ಷಣಿಕ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿ ಕಡೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಸೋಮವಾರಪೇಟೆ ವಿಶ್ವಮಾನವ ಕುವೆಂಪು ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿದ್ದ ಶಿವಾಣಿ ಶಾರದಾಮಣಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿ ಕೊಡಗು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಮಡಿಕೇರಿಯ ಸಂತ ಮೈಕಲ್ರ ಪಿ.ಯು. ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ಸಿಂಚನ ಪ್ರಸನ್ನ ಹೆಚ್. ಅವರಿಗೆ ಎನ್.ಟಿ. ಗ್ರೂಪ್ ಮಾಲೀಕರಾದ ಕೆ.ಎಂ.ಎ. ಉಪಾಧ್ಯಕ್ಷ ಅಕ್ಕಳುವಂಡ ಎಸ್. ಮೊಯ್ದು ಅವರು ತಮ್ಮ ಸಹೋದರ ಡೀ. ಅಕ್ಕಳುವಂಡ ಎಸ್. ಹಂಸ ಅವರ ಸ್ಮರಣಾರ್ಥವಾಗಿ ಪ್ರಾಯೋಜಿಸಿರುವ 'ಕೆ.ಎಂ.ಎ. ವಿಶೇಷ ಶೈಕ್ಷಣಿಕ ಪುರಸ್ಕಾರ'ವನ್ನು ತಲಾ ಹತ್ತು ಸಾವಿರ ರೂಪಾಯಿ ನಗದು ಬಹುಮಾನ ಪಾರಿತೋಷಕ ಹಾಗೂ ಪ್ರಶಂಸಾ ಪತ್ರದೊಂದಿಗೆ ನೀಡಿ ಗೌರವಿಸಲಾಯಿತು.

ವಿಶೇಷ ಪ್ರತಿಭಾ ಪುರಸ್ಕಾರ: ಕಳೆದ ಶೈಕ್ಷಣಿಕ ಸಾಲಿನಲ್ಲಿ ಕೊಡಗು ಜಿಲ್ಲೆಗೆ ಹೆಚ್ಚು ಅಂಕ ಪಡೆದ ಮುಸ್ಲಿಮ್ ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನ ಎಂ.ಜೆ. ಮಹಮ್ಮದ್ ಅವರು ಪ್ರಾಯೋಜಿಸಿರುವ 'ಕೆ.ಎಂ.ಎ. ವಿಶೇಷ ಪ್ರತಿಭಾ ಪುರಸ್ಕಾರ'ವನ್ನು ಎಸ್.ಎಸ್.ಎಲ್.ಸಿ. ವಿಭಾಗದಲ್ಲಿ ಕೊಟ್ಟಮುಡಿಯ ಮರ್ಕೆಜ್ pública ಶಾಲೆಯ ವಿದ್ಯಾರ್ಥಿನಿಯಾಗಿದ್ದ ಕುಂಜಲದ ಪಿ.ಐ. ಜುನೈಸಾ, ದ್ವಿತೀಯ ಪಿಯುಸಿ ವಿಭಾಗದಲ್ಲಿ ವಿರಾಜಪೇಟೆಯ ಕಾವೇರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ಕುಂಜಿಲದ ಎಂ.ಎಸ್. ಫರೀದಾ (ಶೇ. 98) ಹಾಗೂ ಮೂರ್ನಾಡು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ಕೆ.ಎಂ. ಜುಹರ (ಶೇ. 95) ಅವರಿಗೆ ನೀಡಿ ಸನ್ಮಾನಿಸಲಾಯಿತು

ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಸಮುದಾಯದ ಹಿರಿಯ ಸಾಧಕರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ರಾಷ್ಟ್ರೀಯ ಮಾನವ ಶ್ರೇಷ್ಠತಾ ಪುರಸ್ಕಾರ ಪುರಸ್ಕೃತ ದುದ್ದಿಯಂಡ ಹೆಚ್. ಸೂಫಿ ಹಾಜಿ, ರಾಷ್ಟ್ರ ಪ್ರಶಸ್ತಿ ವಿಜೇತ ನಿವೃತ್ತ ಮುಖ್ಯೋಪಾಧ್ಯಾಯ ಎಡಪಾಲಿನ ಒಕ್ಕರಿಗೆ ಜಿ. ಉಮ್ಮೈರ್ ಮಾಸ್ಟರ್, ರಾಷ್ಟ್ರಪತಿ ಪದಕ ಪುರಸ್ಕೃತ ಪೊಲೀಸ್ ಇನ್‌ಸ್ಪೆಕ್ಟರ್ ಮೀನಕೇರಿ ಎ. ಮಹಮ್ಮದ್ (ಶಸ್ತ್ರಪ್ರಿಯ) ಮುಖ್ಯಮಂತ್ರಿಗಳ ಪದಕ ಪುರಸ್ಕೃತ ಸಿಐಡಿ ಡಿಟೆಕ್ಟಿವ್ ಇನ್‌ಸ್ಪೆಕ್ಟರ್ ಕುಪ್ಪೋಡಂಡ ಜಿ. ರಫೀಕ್, ನಿವೃತ್ತ ಸೈನಿಕ ಅಂಬಟ್ಟಿಯ ಕರ್ತೋರೇರ ಎ. ಮುಸ್ತಫಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಡಾ. ಜೋಯಿಪೇರೆ ಕುಂಕಿ ಅಬ್ದುಲ್ಲಾ, ಉಪಾಧ್ಯಕ್ಷ ಅಕ್ಕಳುವಂಡ ಎಸ್. ಮೊಯ್ದು, ಪ್ರಧಾನ ಕಾರ್ಯದರ್ಶಿ ಈತಲತಂಡ ರಫೀಕ್ ತೂಚಮಕೇರಿ, ಸಂಘಟನಾ ಕಾರ್ಯದರ್ಶಿ ಮೀತಲತಂಡ ಎಂ. ಇಸ್ಮಾಯಿಲ್, ಕೋಶಾಧಿಕಾರಿ ಹರಿಶ್ಚಂದ್ರ ಎ. ಹಂಸ ಸೇರಿದಂತೆ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸರ್ಕಾರಿ ನೌಕರರಿಗಿನ್ನು KAAMS ಆಧಾರಿತ "ಕರ್ತವ್ಯ" ಕಡ್ಡಾಯ...

@Nadubadenews; ನ.17;

ಬೆಂಗಳೂರು:- ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಡಿಜಿಟಲ್ ಆಡಳಿತವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು, ಇನ್ನುಮುಂದೆ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ಚಲನವಲನ ವಿವರಗಳು ಹಾಗೂ ನಗದು ಘೋಷಣಾ ದಾಖಲಾತಿಗಳನ್ನು ಕಡ್ಡಾಯವಾಗಿ KAAMS ಆಧಾರಿತ "ಕರ್ತವ್ಯ" ಮೊಬೈಲ್ ಅಪ್ಲಿಕೇಶನ್‌ನಲ್ಲಿಯೇ ದಾಖಲಿಸಬೇಕೆಂದು ಆದೇಶ ಹೊರಡಿಸಿದೆ. ಡಿಸೆಂಬರ್ 1ರಿಂದ ಜಾರಿಗೆ ಬರುವ ಈ ನಿಯಮ ಪಾಲಿಸದ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸರ್ಕಾರ ಎಚ್ಚರಿಕೆ ನೀಡಿದೆ.

ಈ ಹೊಸ ವ್ಯವಸ್ಥೆಯು ಡಿಸೆಂಬರ್ 1, 2026ರಿಂದ ಜಾರಿಗೆ ಬರಲಿದ್ದು, ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಆಡಳಿತಾತ್ಮಕ ಪಾರದರ್ಶಕತೆ ಮತ್ತು ಜವಾಬ್ದಾರಿತನವನ್ನು ಮತ್ತಷ್ಟು ಬಲಪಡಿಸುವ ಉದ್ದೇಶವನ್ನು ಹೊಂದಿದೆ.

ಈ ಕುರಿತು ಪ್ರಜಾಸೇವಾ ಇಲಾಖೆ ಅಧಿಸೂಚನೆ ಹೊರಡಿಸಿದ್ದು, ಸರ್ಕಾರಿ ನೌಕರರು ಕಚೇರಿಯಿಂದ ಅನ್ಯ ಕರ್ತವ್ಯಗಳ ನಿರ್ವಹಣೆಗೆ ಹೊರ ಹೋಗುವ ಸಂದರ್ಭಗಳಲ್ಲಿ ತಮ್ಮ ಚಲನವಲನದ ವಿವರಗಳನ್ನು ಕಡ್ಡಾಯವಾಗಿ ದಾಖಲಿಸಿ ಮೇಲಾಧಿಕಾರಿಗಳ ಅನುಮೋದನೆ ಪಡೆಯಬೇಕೆಂಬ ಹಿಂದಿನ ನಿಯಮಗಳನ್ನು ಮತ್ತೊಮ್ಮೆ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ. ಕಚೇರಿ ಕಾರ್ಯಗಳಿಗೆ ಸಂಬಂಧಿಸಿ ಹೊರಗಡೆ ತೆರಳುವ ಅಧಿಕಾರಿ ಅಥವಾ ಸಿಬ್ಬಂದಿ ಗೈರುಹಾಜರಿ ಕುರಿತು ಸ್ಪಷ್ಟ ಮಾಹಿತಿ ಲಭ್ಯವಾಗುವಂತೆ ಚಲನವಲನ ನೋಂದಣಿಯನ್ನು ಸರಿಯಾಗಿ ನಿರ್ವಹಿಸುವುದು ಅವಶ್ಯಕ ಎಂದು ಸರ್ಕಾರ ತಿಳಿಸಿದೆ.

ಅದೇ ರೀತಿ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದ ಅನ್ವಯ, ಸರ್ಕಾರಿ ಇಲಾಖೆಗಳು, ಮಂಡಳಿಗಳು ಮತ್ತು ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಯೊಬ್ಬ ನೌಕರರು ತಾವು ಪ್ರತಿದಿನ ಕರ್ತವ್ಯಕ್ಕೆ ಹಾಜರಾಗುವ ವೇಳೆ ತಮ್ಮ ಬಳಿ ಇರುವ ನಗದು ಮೊತ್ತದ ವಿವರವನ್ನು ನಗದು ಘೋಷಣಾ ವಹಿಯಲ್ಲಿ ದಾಖಲಿಸುವ ನಿಯಮವೂ ಮುಂದುವರಿಯಲಿದೆ. ಈ ಕ್ರಮದ ಮೂಲಕ ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತ ಹಾಗೂ ಭ್ರಷ್ಟಾಚಾರ ನಿಯಂತ್ರಣಕ್ಕೆ ಉತ್ತೇಜನ ನೀಡುವ ಉದ್ದೇಶ ಹೊಂದಲಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಸರ್ಕಾರದ ಗಮನಕ್ಕೆ ಬಂದಂತೆ ಅನೇಕ ಕಚೇರಿಗಳಲ್ಲಿ ಚಲನವಲನ ವಹಿ ಹಾಗೂ ನಗದು ಘೋಷಣಾ ವಹಿಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿಲ್ಲ ಎಂಬ ವರದಿಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಸರ್ಕಾರ ಈಗಾಗಲೇ ಹಲವು ಸುತ್ತೋಲೆಗಳನ್ನು ಹೊರಡಿಸಿ ನಿಯಮಗಳ ಪಾಲನೆಗೆ ಸೂಚನೆ ನೀಡಿದ್ದರೂ, ಕೆಲವು ಕಡೆಗಳಲ್ಲಿ ನಿರ್ಲಕ್ಷ್ಯ ಕಂಡುಬಂದಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇದೇ ಕಾರಣಕ್ಕಾಗಿ ಈಗ ಈ ಎರಡೂ ಪ್ರಕ್ರಿಯೆಗಳನ್ನು ಡಿಜಿಟಲ್ ವೇದಿಕೆಗೆ ವರ್ಗಾಯಿಸಿ "ಕರ್ತವ್ಯ" ಅಪ್ಲಿಕೇಶನ್ ಮೂಲಕ ಕಡ್ಡಾಯಗೊಳಿಸಲು ನಿರ್ಧರಿಸಲಾಗಿದೆ.

ಈ ಹಿಂದೆ ರಾಜ್ಯ ಸರ್ಕಾರವು ಏಪ್ರಿಲ್ 15, 2026ರಿಂದ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳು, ನಿಗಮಗಳು ಮತ್ತು ಮಂಡಳಿಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ KAAMS ಆಧಾರಿತ "ಕರ್ತವ್ಯ" ಅಪ್ಲಿಕೇಶನ್‌ನಲ್ಲಿ ಹಾಜರಾತಿ ದಾಖಲಿಸುವ ವ್ಯವಸ್ಥೆಯನ್ನು ಜಾರಿಗೆ ತಂದಿತ್ತು. ಇದೀಗ ಅದೇ ತಂತ್ರಾಂಶದಲ್ಲಿ ಚಲನವಲನ ವಹಿ ಮತ್ತು ನಗದು ಘೋಷಣಾ ವಹಿ ದಾಖಲಿಸುವ ಸೌಲಭ್ಯವನ್ನು ಸೇರ